ಶ್ರೀ ಹೆಚ್.ಡಿ. ದೇವೇಗೌಡ.—ಈ ಸಲ ನಾವು ಒಟ್ಟು ೩೦೨ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಸರ್ಕಾರ ಜಿ.ಓ.ಇಷ್ಟೂ ಆಗಿದೆ. ಆದರೆ ವರ್ಕ್‌ಪೈಸ್ ಸ್ಯಾಂಕ್ಷನ್ ಆರ್ಡರನ್ನು ಇನ್ನೂ ಕೊಡಬೇಕಾಗಿದೆ. ಕೆಲವಕ್ಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಕೊಡುತ್ತಾರೆ. ಕೆಲವಕ್ಕೆ ಚೀಫ್-ಇಂಜಿನಿಯರ್ ಅವರು ಕೊಡುತ್ತಾರೆ. ಮತ್ತೆ ಕೆಲವು ಕೆಲಸಗಳಿಗೆ ಸರ್ಕಾರವೇ ಸ್ಯಾಂಕ್ಷನ್ ಆರ್ಡರ್ ಕೊಡುತ್ತದೆ. ಈ ೩೦೨ ಕೆಲಸಗಳ ಪೈಕಿ ಶಿವಮೊಗ್ಗ ಜಿಲ್ಲೆಯಲ್ಲಿ ೪೨ ಕೆಲಸಗಳನ್ನು ಪ್ರೈಯಾರಿಟಿ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತೇವೆ. ಈ ಸಲ ೧೭ ಕೆಲಸಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ಈ ಬಗ್ಗೆ ನಾನು ಇಷ್ಟು ಮಾತ್ರ ಹೇಳುತ್ತೇನೆ, ನಮ್ಮ ಅಧಿಕಾರಿಗಳು ಕೊಟ್ಟಂತಹ ವರದಿಯ ಆಧಾರದ ಮೇಲೆ ಅಂದರೆ ಪೂರ್ಣಕಾಸಿನ ದೃಷ್ಟಿಯಿಂದ ಮತ್ತು ತಾಂತ್ರಿಕ ದೃಷ್ಟಿಯಿಂದ ಫೀಜಿಬಲ್ ಎಂದು ಕೊಟ್ಟಂಥ ವರದಿ ಆಧಾರದ ಮೇಲೆ ಈ ಸಲದ ಬಜೆಟ್‌ನಲ್ಲಿ ೩೦೨ ಕೆಲಸಗಳನ್ನು ಸೇರಿಸಬೇಕೆಂದು ಅಂತಿಮ ತೀರ್ಮಾನಕ್ಕೆ ಬಂದಿದ್ದೇವೆ ನಮ್ಮ ಅಧಿಕಾರಿಗಳು ಬರಗಾಲದ ಕೆಲಸವನ್ನು ಸಹ ಮಾಡಬೇಕಾಗಿದೆ. ಆದರ ಜೊತೆಗೆ ಹೊಸ ಕೆಲಸಗಳ ಎಸ್ಟಿಮೇಟ್ ಸಹ ತಯಾರು ಮಾಡಬೇಕಾಗಿದೆ. ನಾನು ನಮ್ಮ ಅಧಿಕಾರಿಗಳ ಕೆಲಸಗಳನ್ನು ರಿವ್ಯೂ ಮಾಡುತ್ತಿದ್ದೇನೆ. ವರ್ಷದಲ್ಲಿ ಆರೇಳು ತಿಂಗಳುಗಳ ಕಾಲ ನಮ್ಮ ಅಧಿಕಾರಿಗಳು ಬರಗಾಲದ ಕೆಲಸವನ್ನು ನೋಡಿಕೊಳ್ಳಬೇಕಾಗಿದೆ. ಇದರ ಜೊತೆಗೆ ಹೊಸ ಕೆಲಸಗಳ ಇನ್‌ವೆಸ್ಟಿಗೇಷನ್ ಮಾಡಬೇಕಾಗುತ್ತದೆ ಮತ್ತು ಎಸ್ಟಿಮೇಟ್‌ಗಳನ್ನು ತಯಾರು ಮಾಡಬೇಕಾಗುತ್ತದೆ. ಈಗ ೩೦೨ ಕೆಲಸಗಳ ಎಸ್ಟಿಮೇಟ್‌ಗಳು ರೆಡಿ ಇದೆ. ಅವುಗಳಿಗೆ ಸ್ಯಾಂಕ್ಷನ್ ಕೊಡುತ್ತಿದ್ದೇವೆ. ನಾವು ಮಂಜೂರಾತಿ ಕೊಡುವಾಗ ವಿರೋಧಪಕ್ಷದ್ದು ಮತ್ತು ಆಡಳಿತ ಪಕ್ಷದ್ದು ಎಂದು ನೋಡುವುದಿಲ್ಲ. ಪಟ್ಟಿಯಲ್ಲಿ ಸೇರಿರುವ ಕೆಲಸಗಳಿಗೆಲ್ಲಾ ಮಂಜೂರಾತಿ ಕೊಡುತ್ತಿದ್ದೇವೆ.

ಒಣ ಬೇಸಾಯ ಅಭಿವೃದ್ಧಿ ಮಂಡಳಿಯಲ್ಲಿ ಹಳ್ಳಿಗಳನ್ನು ಸೇರಿಸುವುದು

೩೮ (೧೭೨) ಶ್ರೀ ಪಿ.ವಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಕೃಷಿ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಡೂರು ತಾಲ್ಲೂಕಿನ ಒಣ ಬೇಸಾಯ ಅಭಿವೃದ್ಧಿ ಮಂಡಳಿಪತಿಯಿಂದ ಕೇವಲ ೫೨ ಗ್ರಾಮಗಳನ್ನು ಮಾತ್ರ ತೆಗೆದುಕೊಂಡಿದ್ದು ಇಡೀ ಕಡೂರು ತಾಲ್ಲೂಕು ಪೂರಾ ಮೈದಾನ ಪ್ರದೇಶವಾಗಿರುವುದರಿಂದ ಎಲ್ಲಾ ಹಳ್ಳಿಗಳನ್ನು ಒಣ ಬೇಸಾಯ ಅಭಿವೃದ್ಧಿ ಮಂಡಳಿಯ ಕಾರ್ಯಾಪ್ಯಾಪ್ತಿಗೆ ಸೇರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಆ) ಹಾಗಿದ್ದಲ್ಲಿ ಯಾವಾಗ ಈ ಕ್ರಮವನ್ನು ಕೈಗೊಳ್ಳಲಾಗುವುದು ?

ಇ) ಕಡೂರು ತಾಲ್ಲೂಕಿನ ಬಹಳ ಗ್ರಾಮಗಳಲ್ಲಿ ಚಾಳು ಭೂಮಿ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅವುಗಳನ್ನು ಸರಿಪಡಿಸಲು ಈವರೆಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಈಗ ಕಡೂರು ತಾಲ್ಲೂಕಿನ ೫೨ ಗ್ರಾಮಗಳನ್ನೊಳಗೊಂಡ ಮುಗಳಿಕಟ್ಟೆ (ಯುಗಟಿ ಬಸವನಹಳ್ಳಿ) ಜಲಾಯನ ಪ್ರದೇಶದಲ್ಲಿ ಭೂಅಭಿವೃದ್ಧಿ ಕಾರ್ಯಗಳನ್ನು ಪ್ರಾಯೋಗಿಕ ಆಧಾರದ ಮೇಲೆ ಕೈಗೊಳ್ಳಲಾಗಿದ್ದು, ಇಲ್ಲಿಯ ಕಾರ್ಯವು ಪೂರ್ಣಗೊಂಡ ನಂತರ, ಹೊಸ ಕ್ಷೇತ್ರಗಳನ್ನು ಜಲಾನಯನ ಆಧಾರದ ಮೇಲೆ ಆರಿಸಿ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಈಗಿನ ಜಲಾನಯನ ಪ್ರದೇಶದಲ್ಲಿ ರೂಪಿಸಿರುವ ಎಲ್ಲಾ ಕಾರ್ಯಗಳು ೧೯೯೦-೯೧ನೇ ಸಾಲಿನಲ್ಲಿ ಪೂರ್ಣಗೊಳ್ಳಲಿದ್ದು ನಂತರ ಹೊಸ ಜಲಾನಯನ ಪ್ರದೇಶಗಳನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಹೌದು. ಕಡೂರು ತಾಲ್ಲೂಕಿನಲ್ಲಿ ಈಗಾಗಲೇ ೨೫೧೦ ಹೆಕ್ಟೇರ್ ಜಮೀನು ಅಭಿವೃದ್ಧಿಪಡಿಸಲಾಗಿದೆ. ಈ ತಾಲ್ಲೂಕೂ ಸೇರಿದಂತೆ ಇಡೀ ರಾಜ್ಯದಲ್ಲಿ ಗುರುತಿಸಲಾದ ಚಾಳು ಮತ್ತು ಕ್ಷಾರೀಯ ಜಮೀನುಗಳನ್ನು ಅಭಿವೃದ್ಧಿಪಡಿಸಲು ಒಂದು ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ೫-೯-೧೯೮೬ರಲ್ಲಿ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಈ ಪ್ರಸ್ತಾಪನೆಗೆ ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಕಡೂರು ತಾಲ್ಲೂಕಿನ ಇನ್ನುಳಿದ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುವುದು.

ಶ್ರೀ ಪಿ.ಬಿ. ಓಂಕಾರಮೂರ್ತಿ.—ಈಗ ಕಡೂರು ತಾಲ್ಲೂಕಿನಲ್ಲಿ ೧೦-೧೫ ಇಂಚ್‌ನಷ್ಟು ಮಾತ್ರ ಮಳೆ ಬರುತ್ತದೆ. ಆದರೂ ಸಹ ಅಲ್ಲಿರುವ ೩೦೦ ಗ್ರಾಮಗಳ ಪೈಕಿ ಕೇವಲ ೫೨ ಗ್ರಾಮಗಳನ್ನು ಮಾತ್ರ ಒಣ ಬೇಸಾಯ ಅಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿಗೆ ಸೇರಿಸಲು ಕಾರಣವೇನು? ಈ ೨೫೦ ಗ್ರಾಮಗಳಿಗೆ ಯಾವ ಸೌಲಭ್ಯವೂ ಸಿಗದಿರುವ ಕಾರಣದಿಂದ ಇವುಗಳನ್ನು ಸಹ ಈ ಒಣ ಬೇಸಾಯ ಅಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿಗೆ ಸೇರಿಸುತ್ತೀರಾ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಈಗ ೫೨ ಗ್ರಾಮಗಳನ್ನೊಳಗೊಂಡ ಮುಗಳಿಕಟ್ಟೆ (ಯಾಗಟಿ ಬಸವನಹಳ್ಳಿ) ಜಲಾಯನ ಪ್ರದೇಶದಲ್ಲಿ ಭೂಅಭಿವೃದ್ಧಿ ಕಾರ್ಯಗಳನ್ನು ಪ್ರಾಯೋಗಿಕ ಆಧಾರದ ಮೇಲೆ ಕೈಗೊಳ್ಳಲಾಗಿದೆ. ಈ ಜಲಾಯನ ಪ್ರದೇಶದ ಕೊನೆಯ ಹಂತದಲ್ಲಿರುವವರಿಗೂ ಅನುಕೂಲವಾಗಬೇಕು ಮತ್ತು ಬರಗಾಲ ಪೀಡಿತ ಪ್ರದೇಶದ ಜನರಿಗೆ ಹೆಚ್ಚಿನ ಅನುಕೂಲವಾಗಬೇಕೆಂಬ ಕಾರಣದಿಂದ ಈ ಕೆಲಸವನ್ನು ಕೈಕೊಳ್ಳಲಾಗಿದೆ. ಈ ಒಂದು ಕಾರ್ಯಕ್ರಮ ಮುಗಿದನಂತರ ನಾವು ಮತ್ತೆ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುತ್ತೇವೆ.

ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ ಬಗ್ಗೆ

೩೯ (೨೮೬ ಎ) ಚಂದ್ರಶೇಖರ ಪಾಮನಿ (ಸವದತ್ತಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗೆ ಒಂದು ಮುಖ್ಯ ಅಭಿಯಂತರರವರ ಕಾರ್ಯಾಲಯ ಇದ್ದು, ಈ ಯೋಜನೆಯ ಕೆಲಸಗಳು ನಿಧಾನವಾಗಿ ಸಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಎರಡು ಯೋಜನೆಗಳನ್ನು ಬೇರ್ಪಡಿಸಿ ಮಲಪ್ರಭಾ ಯೋಜನೆಗೆ ಒಂದು ಪ್ರತ್ಯೇಕ ಮುಖ್ಯ ಅಭಿಯಂತರರನ್ನು ನೇಮಿಸಿ ಮಲಪ್ರಭಾ ಯೋಜನೆಯ ಕೆಲಸಗಳನ್ನು ಅತೀ ತೀವ್ರತೆಯಿಂದ ಪೂರ್ತಿಗೊಳಿಸಬೇಕೆಂಬ ವಿಚಾರ ಸರ್ಕಾರಕ್ಕೆ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಗಳ ಕೆಲಸಗಳು ಸುಗಮವಾಗಿ ಸಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಚಂದ್ರಶೇಖರ ಪಾಮನಿ.—ನಾನು ಈ ಯೋಜನೆಯ ಕೆಲಸಗಳು ನಿಧಾನವಾಗಿ ಸಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಈ ಯೋಜನೆಗಳ ಕೆಲಸಗಳು ಸುಗಮವಾಗಿ ಸಾಗುತ್ತಿದೆ' ಎಂದು ಹೇಳಿದ್ದಾರೆ. ಈ ಯೋಜನೆ ಪ್ರಾರಂಭವಾಗಿ ೨೫ ವರ್ಷಗಳಾಯಿತು. ಈ ಕೆಲಸ ಮುಗಿಯಲು ತಮಗೆ ಇನ್ನೂ ಎಷ್ಟು ಕಾಲಾವಕಾಶ ಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಮಲಪ್ರಭಾ ಯೋಜನೆಗೆ ಒಂದು ಪ್ರತ್ಯೇಕ ಮುಖ್ಯ ಅಭಿಯಂತರರನ್ನು ನೇಮಕ ಮಾಡುತ್ತೀರಾ ಎಂದು ಕೇಳಿದ್ದಾರೆ ? ಮತ್ತೊಬ್ಬರು ಮುಖ್ಯ ಅಭಿಯಂತರರನ್ನು ನೇಮಕ ಮಾಡುವುದರಿಂದಲೇ ಈ ಕೆಲಸ ಜಾಗ್ರತೆ ಮುಗಿಯುವುದಾದರೆ ನಾನು ನಾಳೆಯೇ ಈ ಕೆಲಸ ಮಾಡುತ್ತೇನೆ. ಇಲ್ಲಿ ಕೆಲಸ ಕುಂಠಿತವಾಗಿದೆ. ಈ ಕೆಲಸಕ್ಕೆ ಹೆಚ್ಚು ಹಣವನ್ನು ಕೊಟ್ಟರೆ, ಹಣದ ಖರ್ಚಿನ ಅಪಶ್ಯಕತೆ ನೋಡಿಕೊಂಡು ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗುತ್ತದೆಂಬುದನ್ನು ತಾವೂ ಒಪ್ಪುತ್ತೀರಿ ಮತ್ತು ಈ ಸದನ ಒಪ್ಪುತ್ತದೆ. ಎಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆ. ಈಗಿನ ಅಲೋಕೇಷನ್‌ಗಿಂತ ಇನ್ನೂ ಎರಡು ಮೂರು ಪಟ್ಟು ಹೆಚ್ಚು ಹಣ ಒದಗಿಸಿದರೆ, ಅದನ್ನು ಖರ್ಚು ಮಾಡಲು ಒಬ್ಬರು ಮುಖ್ಯ ಅಭಿಯಂತರರವರು ಸಾಕಾಗುವುದಿಲ್ಲ. ಆಗ ಇಬ್ಬರನ್ನು ನೇಮಕ ಮಾಡಬೇಕಾಗುತ್ತದೆ. ಈಗಿನ ಅಲೋಕೇಷನ್‌ಗೆ ಒಬ್ಬರೇ ಸಾಕು ಎಂಬುದು ಸರ್ಕಾರದ ಅಭಿಪ್ರಾಯವಾಗಿದೆ. ನೀರಾವರಿ ಇಲಾಖೆಯ ಡಿಮ್ಯಾಂಡ್‌ಗಳು ಚರ್ಚೆಗೆ ಬಂದಾಗ ಈಗಿನ ಅಲೋಕೇಷನ್‌ಗಿಂತ ೨-೩ ಪಟ್ಟು ಹೆಚ್ಚು ಹಣ ಕೊಡಬೇಕೆಂದು ನೀವೆಲ್ಲರೂ ಸೇರಿ ಒಂದು ನಿರ್ಣಯ ಮಾಡಿದರೆ ಇನ್ನೂ ಒಬ್ಬರನ್ನು ನೇಮಕ ಮಾಡೋಣ.

ಶ್ರೀ ಚಂದ್ರಶೇಖರ ಪಾಮನಿ.—ನಮ್ಮ ಭಾಗದಲ್ಲಿ ಒಂದು ಲಿಫ್ಟ್ ಇರಿಗೇಷನ್ ಕೆಲಸ ಆಗಬೇಕೆಂದು ನಾನು ತಮಗೆ ಬರೆದಿದ್ದೆ. ಅದಕ್ಕೆ ತಾವು ಇಲ್ಲಿ ಉತ್ತರ ಕೊಟ್ಟಿಲ್ಲ. ತಾವು ಸೌಂದತ್ತಿಗೆ